# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2450

ಸದಸ್ಯರ ಹೆಸರು : ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 27.03.2026

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಸರ್ಕಾರಿ ನೌಕರರ ಜಿಲ್ಲಾ ವೃಂದದ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಇರುವ ನಿಯಮಗಳು ಯಾವುವು? | ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957 ರ ನಿಯಮ 10 ರಡಿಯಲ್ಲಿ ಜಿಲ್ಲಾ ವೃಂದದ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. |
| (ಆ) | ಜಿಲ್ಲಾ ಜೇಷ್ಠತಾ ಪಟ್ಟಿಗಳನ್ನು ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನಾಗಿ ಸಿದ್ಧಪಡಿಸಲು ಇರುವ ನಿಯಮಗಳು ಯಾವುವು; | ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 7A ಅಡಿಯಲ್ಲಿ ರಾಜ್ಯ ಮಟ್ಟದ inter-se ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. |
| (ಇ) | 2010ರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಸದರಿ ನಿಯಮಗಳನ್ನು ಪಾಲಿಸಲಾಗಿದೆಯೇ; | 2010 ರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957 ನಿಯಮ 7A ಅನುಸರಿಸಿ ಸಿದ್ಧಪಡಿಸಲಾಗಿದೆ. |
| (ಈ) | ಯಾವ ನಿಯಮಗಳಡಿ ಜಿಲ್ಲಾ ಜೇಷ್ಠತಾ ಪಟ್ಟಿಯಲ್ಲಿಯ ಜೇಷ್ಠತಾ ದಿನಾಂಕಗಳನ್ನು ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯಲ್ಲಿ ಬದಲಾಯಿಸಲು ಅವಕಾಶವಿದೆ; | ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ 4524/2021 ರ ಸಂಬಂಧವಾಗಿ ಮಾನ್ಯ ನ್ಯಾಯಾಲಯದಲ್ಲಿ, 2010 ರಲ್ಲಿ ನೇರ ನೇಮಕಾತಿ ಹೊಂದಿರುವ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸುವ ಕುರಿತು ಸರ್ಕಾರದಿಂದ ವಿವಿಧ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹೊರಡಿಸಲಾದ ನಾಲ್ಕು ಪತ್ರಗಳಲ್ಲಿ ನಿರ್ದಿಷ್ಟಪಡಿಸಿದ ವಿವಿಧ ದಿನಾಂಕಗಳಂದು ನೇಮಕಾತಿ ಆದೇಶಗಳನ್ನು ಹೊರಡಿಸಲು ಹಾಗೂ ನಿರ್ದಿಷ್ಟ ದಿನಾಂಕದಂದು ಕರ್ತವ್ಯಕ್ಕೆ ಹಾಜರಾಗಲು ಸೂಚಿಸಿ ಮಾರ್ಗಸೂಚಿ ನೀಡಲಾಗಿದ್ದ ಕಾರಣ ನೌಕರರ ಜೇಷ್ಠತೆಯನ್ನು ನಿರ್ಧರಿಸಲು ಉಂಟಾಗಿರುವ ಅಸಂಗತ ಪರಿಸ್ಥಿತಿಯನ್ನು (Anomalous situation) ತಪ್ಪಿಸಲು, 2010 ರ ನೇರ ನೇಮಕಾತಿ ಅಭ್ಯರ್ಥಿಗಳಿಗೆ ದಿನಾಂಕ:19.03.2010 ರ ದಿನಾಂಕವನ್ನು ಜೇಷ್ಠತೆಗೆ ಪರಿಗಣಿಸುವುದಾಗಿ ಸರ್ಕಾರದಿಂದ ಸಲ್ಲಿಸಲಾದ ಪ್ರಮಾಣ ಪತ್ರದ ಅನುಸಾರ ಜೇಷ್ಠತಾ ಪಟ್ಟಿ ಸಿದ್ಧಪಡಿಸುವಂತೆ ಮಾನ್ಯ ನ್ಯಾಯಾಲಯವು ದಿನಾಂಕ:10.12.2025 ನೀಡಿರುವ ಆದೇಶವನ್ನು ಅನುಸರಿಸಿ ರಾಜ್ಯ ಮಟ್ಟದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. |
| (ಉ) | ಸದರಿ ಕ್ರಮಕ್ಕೆ ಅವಕಾಶ ಇಲ್ಲದಿದ್ದರೂ ಬದಲಾಯಿಸಿರುವುದು ಕಾನೂನು ಬಾಹಿರ ಕ್ರಮವಲ್ಲವೇ? | ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ 4524/2021, ದಿನಾಂಕ: 10.12.2025 ರ ಆದೇಶದನ್ವಯ ಕ್ರಮ ವಹಿಸಲಾಗಿದೆ. |

ಸಂಖ್ಯೆ: ಗ್ರಾಅಪ 345 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.